**ಪಾಠ–8** **ಆಗಸ್ಟ್ 14–20**

# ವಿಶ್ರಾಂತಿ ಪಡೆಯಲು ಬಿಡುವು ಮಾಡಿಕೊಳ್ಳುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಮಾರ್ಕ 2:1–12, 1 ಅರಸು 18, 1 ಅರಸು 19:1–8, ಮತ್ತಾಯ 5:1–3, ಯೆಶಾಯ 53:4–6, 2 ಅರಸು 2:11.

**ಸ್ಮರಣವಾಕ್ಯ : "ಯೆಹೋವನು ನನಗೆ ಬೆಳಕು ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು ನಾನು ಯಾರಿಗೆ ಹೆದರೇನು**" ಕೀರ್ತನೆ 27:1.

ಯೇಸುಕ್ರಿಸ್ತನು ತನ್ನ ಸುವಾರ್ತಾ ಸೇವಾಕಾರ್ಯದಲ್ಲಿ ತೊಡಗಿರುವಾಗ ಆತನು ಸಂಧಿಸುತ್ತಿದ್ದ ಅನೇಕ ಜನರು ರೋಗಿಗಳಾಗಿದ್ದರು, ಒಮ್ಮೊಮ್ಮೆ ಸಾಯುವಷ್ಟು ಅಸ್ವಸ್ಥರಾಗಿರುತ್ತಿದ್ದರು. ಅವರು ಯೇಸುಕ್ರಿಸ್ತನ ಹತ್ತಿರ ಬಂದು ಗುಣಪಡುವುದಕ್ಕೂ ತಮ್ಮ ಬಾಧೆಗಳಿಂದ ಬಿಡುಗಡೆ ಹೊಂದುವುದಕ್ಕೂ ಅವನನ್ನು ಮುತ್ತಿಕೊಳ್ಳುತ್ತಿದ್ದರು. ಅವರಿಗೆ ಯಾವಾಗಲೂ ಆತನಿಂದ ಒಳ್ಳೆಯದೇ ಆಗುತ್ತಿತ್ತು.

ಕೆಲವು ಸಲ ಆತನು ಕೇವಲ ತನ್ನ ಬಾಯಿಮಾತಿನಿಂದ ಸ್ವಸ್ಥ ಮಾಡುತ್ತಿದ್ದನು. ಕೆಲವು ಸಲ ರೋಗಿಯನ್ನು ಮುಟ್ಟುತ್ತಿದ್ದನು. ಅದ್ಭುತವಾಗಿ ಅವನಿಗೆ ಗುಣವಾಗುತ್ತಿತ್ತು. ಕೆಲವು ಸಲ ಅವರನ್ನು ಹಾಗೆಯೇ ಕಳುಹಿಸಿ ಬಿಡುತ್ತಿದ್ದನು. ಆವಾಗ ಸ್ವಸ್ಥತೆಯು ಮಾರ್ಗದಲ್ಲಿರುವಾಗಲೇ ಸ್ವಸ್ಥರಾಗುತ್ತಿದ್ದರು. ಯೇಸುವು ಗಂಡಸರನ್ನು, ಹೆಂಗಸರನ್ನು ಮಕ್ಕಳನ್ನು ಯೆಹೂದ್ಯರನ್ನು ಅನ್ಯಜನರನ್ನು ಶ್ರೀಮಂತರನ್ನು, ಬಡವರನ್ನು

* ಈ ವಾರದ ಪಾಠವನ್ನು ಆಗಸ್ಟ್ 21ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಮುಗ್ಧಜನರನ್ನು ವಾಸಿಪಡಿಸಿದ್ದನು. ಆತನು ನಿಜವಾಗಿ ಅತಿಭಯಂಕರ ರೋಗ ಎಂದು ಹೇಳಬಹುದಾದ ಮರಣವನ್ನೂ ವಾಸಿ ಮಾಡಿದ್ದನು.

ಈ ವಾರದ ಎರಡು ವಿಭಿನ್ನ ರೀತಿಯ ಸ್ವಸ್ಥತೆಯ ಉದಾಹರಣೆಗಳನ್ನು ನೋಡುತ್ತೇವೆ. ಒಂದರಲ್ಲಿ ರೋಗಿಯು ಬಹಳ ಅಸ್ವಸ್ಥನಾಗಿದ್ದಾನೆ. ಆದುದರಿಂದ ಆತನು ಕ್ರಿಸ್ತನ ಹತ್ತಿರಕ್ಕೆ ತಾನಾಗಿ ಬರಲಾರನು. ಆತನ ರೋಗಲಕ್ಷಣಗಳು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿದ್ದವು. ಮತ್ತೊಂದರಲ್ಲಿ ಗ್ರಹಿಸಿಕೊಳ್ಳಬಹುದಾದ ಯಾವ ಲಕ್ಷಣಗಳೂ ಇಲ್ಲ. ಎರಡೂ ಉದಾಹರಣೆಗಳಲ್ಲಿ ತಕ್ಕ ಸಮಯದಲ್ಲಿ ದೈವಿಕ ರೀತಿಯಲ್ಲಿ ಸ್ವಸ್ಥತೆಯಾಯ್ತು.

ನಾವು ನೋವು ಮತ್ತು ಬಾಧೆಗಳಾದ ವಿಶ್ರಾಂತಿ ಹೊಂದುವ ವಿಷಯದಲ್ಲಿ ಶೋಧನೆ ಮಾಡುವಾಗ ನಾವು ಒಂದು ಪ್ರಶ್ನೆಯ ಬಗ್ಗೆಯೂ ಧ್ಯಾನಿಸುತ್ತೇವೆ, ಅದನ್ನು ನಮ್ಮ ಕ್ರೈಸ್ತೀಯ ಜೀವಿತದಲ್ಲಿ ಒಂದಲ್ಲಾ ಒಂದು ಸಮಯದಲ್ಲಿ ಅನುಭವಿಸಿರುತ್ತೇವೆ. ನಾವು ನಮ್ಮ ಸ್ವಸ್ಥತೆಗಾಗಿ ಮಾಡುವ ಪ್ರಾರ್ಥನೆಗಳಿಗೆ ಉತ್ತರ ಸಿಗದಿದ್ದಾಗ ಏನಾಗುತ್ತದೆ? ಆವಾಗ ನಾವು ವಿಶ್ರಾಂತಿ ಹೊಂದುವುದು ಹೇಗೆ?

**ಭಾನುವಾರ** **ಆಗಸ್ಟ್ 15**

## ಸ್ವಸ್ಥತೆ ಕೊಡುವ ವಿಶ್ರಾಂತಿ

ನಮಗೆ ಯಾವಾಗಲಾದರೂ ವಿಶ್ರಾಂತಿ ಅತ್ಯಗತ್ಯವೆನಿಸುವುದು ನಾವು ಸ್ವಸ್ಥರಾದಾಗ ನಮಗೆ ಶಾರೀರಿಕ ವಿಶ್ರಾಂತಿ ಅಗತ್ಯ, ನಮ್ಮ ದೇಹಗಳ ಆಯಾಸ ಪರಿಹಾರವಾಗಿ ರೋಗ ನಿರೋಧಕ ಶಕ್ತಿ ಪಡೆದುಕೊಳ್ಳುವಂತೆ ಮಾಡುತ್ತದೆ.

ಆಗಾಗ್ಗೆ ನಮಗೆ ಮಾನಸಿಕ ವಿಶ್ರಾಂತಿ ಸಹಾ ಬೇಕಾಗುತ್ತದೆ. ಕೆಲವು ಸಲ ಅಸ್ವಸ್ಥತೆ ಎಂಬುದು ಜೀವಕ್ಕೆ ಅಪಾಯ ತರುವಂಥದ್ದೇನಾಗಿರುವುದಿಲ್ಲ. ಶೀತ ಅಥವಾ ತಲೆನೋವು ಅಂಥಾವುಗಳು. ನಾವು ಮಲಗಿ ನಮ್ಮ ಯಾವ ಕೆಲಸದ ಬಗ್ಗೆಯೂ ಚಿಂತಿಸಿದೆ ಹೋದರೆ ಸಾಕು. ಆದರೆ ಅದನ್ನು ಮಾಡಲಾರೆವು.

ಕೆಲವು ಸಲ ಆರೋಗ್ಯ ಸಮಸ್ಯೆಗಳು ಮರಣಕರವಾಗಿರುವಾಗ, ನಾವು ಮಲಗಿಕೊಂಡೇ ನಮ್ಮ ವೈದ್ಯಕೀಯ ಪರೀಕ್ಷೆಗಳ ಫಲಿತಾಂಶಗಳ ಬಗ್ಗೆ ಚಿಂತಿಸುತ್ತೇವೆ. ನಂತರ ಹೀಗೆಕಾಯ್ತು ಎಂದು ಆಶ್ಚರ್ಯಪಡುತ್ತೇವೆ. ನಮ್ಮ ಅನಾರೋಗ್ಯಕರ

ಜೀವನಶೈಲಿ ಕಡೆಯದಾಗಿ ನಮ್ಮನ್ನು ಹಿಡಿದುಕೊಂಡು ಬಿಟ್ಟಿತಲ್ಲಾ? ಇದು ನಾವು 20 ವರ್ಷಗಳ ಹಿಂದೆ ತೆಗೆದುಕೊಂಡ ಔಷಧದಿಂದಲೋ ಸುಮಾರು 20 ವರ್ಷಗಳಾದ 20 ವರ್ಷಗಳಾದ ನನಗಿರುವ ಸ್ವಲ್ಪ ಹೆಚ್ಚಿನ ದೇಹತೂಕವೋ? ದೇವರು ನಾನು ಮಾಡಿದ ಗುಪ್ತ ಪಾಪಗಳಿಗೆ ಈವಾಗ ಶಿಕ್ಷೆ ನೀಡುತ್ತಿರುವನೆ? ಎಂಬುದಾಗಿ ಚಿಂತಿಸುತ್ತೇವೆ. ಮಾರ್ಕ 2:1–4ನ್ನು ಓದಿರಿ. ಇಲ್ಲಿ ಏನು ನಡೆಯುತ್ತಾ ಇದೆ?

ಸಾಮಾನ್ಯವಾಗಿ ಪಾರ್ಶ್ವವಾಯು ರೋಗಿಯ ಪಾಡು ಹೀಗೆಯೆ. ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದ (ಪುಟ 267–271). ಇಲ್ಲಿ ನಮಗೆ ಇದರ ಹಿನ್ನೆಲೆ ತಿಳಿಯುತ್ತದೆ. ಆ ರೋಗಿಯು ತಾನು ಹೆಮ್ಮೆಯಿಂದ ಹೇಳಿಕೊಳ್ಳಲಾರದ್ದನ್ನು ಮಾಡಿದ್ದನು. ಆತನ ಪಾಪಮಯ ಜೀವಿತವು ಅದಕ್ಕೆ ಕಾರಣವಾಗಿತ್ತು. ಆಧ್ಯಾತ್ಮಿಕ ಪಂಡಿತರು ಯಾವಾಗಲೂ ಕಾರಣ ಮತ್ತು ಪರಿಣಾಮಗಳಿಗೆ ನೇರ ಸಂಬಂಧ ಕಲ್ಪಿಸುತ್ತಾರೆ. ಆತನು ಈ ರೋಗವನ್ನು ಪಾಪದ ಜೀವಿತದಿಂದ ತಂದುಕೊಂಡಿದ್ದನು. ಅದಕ್ಕೆ ಪರಿಹಾರವೇ ಇರಲಿಲ್ಲ.

ಮನೋಧೋರಣೆಗಳು ಬಹಳ ವಿಶಿಷ್ಟವಾಗಿರುತ್ತವೆ. ನಾವು ಯಾವಾಗಲೂ ಯಾರು ಹಾಗೆ ಮಾಡಿದವರು ಎಂದು ಆಗಾಗ್ಗೆ ವಿಚಾರಿಸುವ ಗೀಳಿಗೆ ಬಿದ್ದು ಬಿಟ್ಟಿರುತ್ತೇವೆ. ಯಾರೋ ಮಾಡಿದ ಅಪರಾಧಕ್ಕೆ ಇನ್ಯಾರೋ ಹಣತೆರಬೇಕು. ಎಲ್ಲಾದರೂ ಅಪಘಾತವಾದರೆ ಯಾರನ್ನೋ ಕಾನೂನಿನ ಅಡಿಗೆ ತರಬೇಕು. ಆದರೆ ತಪ್ಪನ್ನು ಹೊರಿಸುವುದು ರೋಗದಲ್ಲಿ ಬಿದ್ದವನಿಗೆ ಸ್ವಸ್ಥತೆಯನ್ನಾಗಲಿ ಸಂಪೂರ್ಣತೆಯನ್ನಾಗಲೀ ತರಲಾರದು. ದೇವರ ಮೂಲ ಯೋಜನೆಯಲ್ಲಿ ನೋವು ರೋಗ ಮತ್ತು ನರಳಾಟ ಇವು ಸೇರಿರಲಿಲ್ಲ. ರೋಗವು ಈ ಲೋಕಕ್ಕೆ ಪಾಪ ಪ್ರವೇಶವಾದ ಮೇಲೆ ಬಂದವು. ಆದುದರಿಂದ ದೇವರು ಆರೋಗ್ಯ ಪಾಠಗಳನ್ನು ಕೊಟ್ಟಿದ್ದಾನೆ– ಇದರಿಂದ ನಾವು ಒಳ್ಳೆಯ ಗುಣಮುಖದ ಜೀವನವನ್ನು ಅನುಭವಿಸಬಹುದಾಗಿದೆ. ಆದರೆ ನಾವು ಎಷ್ಟೇ ಚೆನ್ನಾಗಿ ಆರೋಗ್ಯ ನಿಯಮಗಳನ್ನು ಪಾಲಿಸಿದರೂ ಪಾಪ ತುಂಬಿದ ಈ ಲೋಕದಲ್ಲಿ ಇರುವವರೆಗೂ ಆರೋಗ್ಯದ ಖಾತ್ರಿ ಇರುವುದಿಲ್ಲ.

ಒಂದು ಒಳ್ಳೇ ಸಮಾಚಾರವೇನೆಂದರೆ ದೇವರು ನಮಗೆ ವಿಶ್ರಾಂತಿಯನ್ನು ನಾವು ಆರೋಗ್ಯದಲ್ಲಿದ್ದರೂ ಸರಿ ಅನಾರೋಗ್ಯದಲ್ಲಿ ಸರಿ ಕೊಡಬಲ್ಲವನಾಗಿದ್ದಾನೆ. ಈ ರೋಗಕ್ಕೆ ನಾವೇ ಕಾರಣವಾಗಿರಬಹುದು ಅಥವಾ ಮತ್ತೊಬ್ಬರ ನಿರ್ಲಕ್ಷ್ಯವು ಕಾರಣವಾಗಿರಬಹುದು, ನಮ್ಮ ವಂಶವಾಹಿಗಳಾಗಿರಬಹುದು ಅಥವಾ ಪಾಪ ತುಂಬಿದ ಲೋಕದ ಜೀವಿತದ ಪ್ರತ್ಯುತ್ಪನ್ನಗಳಾಗಿರಬಹುದು. ದೇವರಿಗೆ ವಿಶ್ರಾಂತಿ ಕೊಡುವುದು ಹೇಗೆಂದು ಗೊತ್ತು.

ಯಾರಾದರೂ ರೋಗದಲ್ಲಿ ಬಿದ್ದರೆ ಅದಕ್ಕಾಗಿ ಅವರನ್ನು ನಿಂದಿಸುವುದು ಒಳ್ಳೆಯದಲ್ಲ. ಅದೇ ಸಮಯದಲ್ಲಿ ರೋಗ ಕಾರಣಗಳನ್ನು ಅರಿತುಕೊಳ್ಳುವುದು ಕೆಲವು ಸಲ ಅದನ್ನು ವಾಸಿ ಮಾಡುವುದಕ್ಕೆ ನಿರ್ಣಾಯಕ ಹೆಜ್ಜೆಯಾಗಿರುತ್ತದೆ ಏಕೆ?

**ಸೋಮವಾರ** **ಆಗಸ್ಟ್ 16**

## ಮೂಲಕ್ಕೆ ಚಿಕಿತ್ಸೆ

ಪಾರ್ಶ್ವವಾಯು ರೋಗಿಯನ್ನು ಯೇಸುವಿನ ಬಳಿಗೆ ಇಳಿಬಿಟ್ಟರು ಎಲ್ಲರ ಕಣ್ಣುಗಳು ಯೇಸುವಿನ ಮೇಲೆ ಇದ್ದವು ಆತನು ಈ ಪಾಪಿಯನ್ನು ವಾಸಿಪಡಿಸಲು ಇಷ್ಟ ಪಡುವನೇ? ಆತನ ಅಸ್ವಸ್ಥತೆಯನ್ನು ಗದರಿಸಿ ಎತ್ತಿ ಹಾಕುವ ಮಾತನ್ನಾಡುವನೇ?

ಯೇಸುಕ್ರಿಸ್ತನು ಪಾರ್ಶ್ವವಾಯು ರೋಗಿಯನ್ನು ಹೇಗೆ ಸ್ವಸ್ಥಪಡಿಸಿದನು? ಯೇಸುಕ್ರಿಸ್ತನ ಆತನಿಗೆ ಮಾಡಿದ ಮೊದಲ ಕೆಲಸವೇನು?

ನಮಗೆ ರೋಗದ ಗುಣಲಕ್ಷಣಗಳನ್ನು ಗಮನಿಸದೆ ಇರುವ ತನಕ ರೋಗದ ಬಗ್ಗೆ ಇದ್ಯಾವ ರೋಗ ಎಂಬ ಅರಿವು ಇರುವುದಿಲ್ಲ, ನಾವು ರೋಗವನ್ನು ಅದರ ಲಕ್ಷಣದಿಂದ ಗುರುತಿಸುತ್ತೇವೆ. ಅದರ ಲಕ್ಷಣಗಳನ್ನು ತೆಗೆದುಹಾಕುವುದೇ ಗುಣಪಡಿಸಿದಂತೆ ಎಂದುಕೊಳ್ಳುತ್ತೇವೆ. ಯೇಸುಕ್ರಿಸ್ತನ ತನ್ನ ಸ್ವಸ್ಥತೆಯ ಕಾರ್ಯವನ್ನು ಭಿನ್ನ ರೀತಿಯಲ್ಲಿ ಮಾಡಿದನು. ಆತನಿಗೆ ಎಲ್ಲಾ ಬಾಧೆಗಳ ಮತ್ತು ರೋಗಗಳ ಮೂಲಕಾರಣಗಳೂ ಗೊತ್ತಿರಲಾಗಿ ಅದಕ್ಕೆ ಬೇಕಾದ ಚಿಕಿತ್ಸೆಯನ್ನು ಮೊದಲು ಮಾಡುತ್ತಾನೆ.

ಈ ಪಾರ್ಶ್ವವಾಯು ರೋಗಿಯ ಪ್ರಕರಣದಲ್ಲಿ, ಗ್ರಹ್ಯವಾದ (ಹೊರಗೆ ಕಾಣಿಸುವ) ಪರಿಣಾಮಗಳಿಗೆ ಕೂಡ ಚಿಕಿತ್ಸೆ ಮಾಡುವ ಬದಲು ಯೇಸುಕ್ರಿಸ್ತನು ಆ ಮನುಷ್ಯನನ್ನು ಬಹಳವಾಗಿ ಬಾಧಿಸುತ್ತಿರುವ ಸಮಸ್ಯೆಗೆ ನೇರವಾಗಿ ಬಂದನು. ಆ ಪಾರ್ಶ್ವವಾಯು ರೋಗಿಗೆ ತನ್ನ ಪಾಪಪ್ರಜ್ಞೆ ಮತ್ತು ದೇವರಿಂದ ಅಗಲಿ ಹೋಗಿರುವ ಭಾರವು ರೋಗದ ಭಾರಕ್ಕಿಂತ ಹೆಚ್ಚಾಗಿತ್ತು. ದೇವರಲ್ಲಿ ನೆಲೆಗೊಂಡಿರುವ ವ್ಯಕ್ತಿಯು ಈ ಪಾಪದ ಲೋಕದಲ್ಲಿ ತನಗೆ ಬರುವ ದೈಹಿಕ ಎಲ್ಲಾ ಬಾಧೆಗಳನ್ನು ಸಹಿಸಿಕೊಳ್ಳಬಲ್ಲವನಾಗಿರುತ್ತಾನೆ; ಆದುದರಿಂದ ಯೇಸುಕ್ರಿಸ್ತನು ಮೂಲಕ್ಕೆ ಹೋಗಿ ಅವನಿಗೆ ಮೊದಲು ಕ್ಷಮಾಪಣೆ ಕೊಟ್ಟನು.

ಧಾರ್ಮಿಕ ನಾಯಕರು ಯೇಸುಕ್ರಿಸ್ತನು 'ಕ್ಷಮಾಪಣೆ' ಮಾಡಿದುದಕ್ಕೆ ಆಘಾತ ಪಟ್ಟುಕೊಂಡರು. ಅವರ ಆಪಾದನೆಗಳಿಗೆ ಪ್ರತಿಯಾಗಿ ಯೇಸುಕ್ರಿಸ್ತನು ಅವರಿಗೆ ಬಂದು ಪ್ರಶ್ನೆ ಹಾಕಿದನು. ಮಾರ್ಕ 2:8,9 ವಚನಗಳು. ಯೇಸುವು ಶಾಸ್ತ್ರಿಗಳಿಗೆ ಯಾವ ಸವಾಲನ್ನು ಹಾಕುತ್ತಿದ್ದಾನೆ? ಯಾವ ವಿಷಯವನ್ನು ನಿಜವಾಗಿ ಪರಿಗಣಿಸಲಾಗಿದೆ?

ಮಾತು ಸಾಮಾನ್ಯವಾಗಿ ಅಗ್ಗವಾದುದು– ಆದರೆ ದೇವರ ಮಾತು ಹಾಗಲ್ಲ. ದೇವರ ಮಾತಿನ ಶಕ್ತಿಯಿಂದ ಎಲ್ಲಾ ಸೃಷ್ಟಿಯು ಅಸ್ತಿತ್ವಕ್ಕೆ ಬಂತು (ಆದಿಕಾಂಡ 1ನೇ ಅಧ್ಯಾಯ). ಆದಾಗ್ಯೂ, ಕ್ಷಮಾಪಣೆಯು ನಾವು ನೆನಸಿಕೊಂಡಂತಲ್ಲ, ಇದು ಬಹಳ ದುಬಾರಿ (ಹೆಚ್ಚು ಬೆಲೆಯುಳ್ಳದ್ದು). ಕ್ಷಮಾಪಣೆಯ ಬೆಲೆಯು ದೇವಕುಮಾರನ ಜೀವವನ್ನೇ ಶಿಲುಬೆಯ ಮೇಲೆ ಪಡೆದುಕೊಳ್ಳುವಷ್ಟು ದೊಡ್ಡದಾಗಿದೆ. ಉಳಿದಿರುವ ಎಲ್ಲಕ್ಕೂ ಎರಡನೇ ಸ್ಥಾನ. ಕ್ಷಮಾಪಣೆಯ ಶಕ್ತಿ ಮತ್ತು ವಾಸ್ತವತೆಯನ್ನು ಎತ್ತಿ ತೋರಿಸದ ಮೇಲೆ ಕ್ರಿಸ್ತನು ರೋಗವನ್ನು ಗುಣಪಡಿಸಲು ಆಯ್ಕೆ ಮಾಡಿದನು.

ದೇವರು ಮೊದಲು ನಮ್ಮ ಆಂತರ್ಯವನ್ನು ಸ್ವಸ್ಥಪಡಿಸುತ್ತಾನೆ. ಆಮೇಲೆ ಆತನು ನಮಗೆ ಕೆಲವು ಸಲ ತಕ್ಷಣ ದೈಹಿಕಸ್ವಸ್ಥತೆ ಕೊಡಲು ಆಯ್ಕೆ ಮಾಡುತ್ತಾನೆ. ಪಾರ್ಶ್ವವಾಯು ರೋಗಿಗೆ ಹೀಗೆಯೇ ಮಾಡಿದನು. ಇಲ್ಲದೆ ಹೋದರೆ ನಾವು ಸಂಪೂರ್ಣವಾಗಿ ದೈಹಿಕಸ್ವಸ್ಥತೆ ಕಾಣಲು ಪುನರುತ್ಥಾನದ ಬೆಳಗಿನ ಜಾವವನ್ನು ಕಾಯಬೇಕಾಗುತ್ತದೆ. ಹೇಗಾದರೂ ಸರಿಯೇ, ಎರಡು ರೀತಿಯಲ್ಲೂ ನಮ್ಮ ರಕ್ಷಕನಾದ ಯೇಸುಕ್ರಿಸ್ತನಿಗೆ ನಾವು ಅವನ ಪ್ರೀತಿಯ ಮತ್ತು ಕೃಪೆಯ ಮತ್ತು ಕ್ಷಮಾಪಣೆಯ

ಆಶ್ವಾಸನೆಯಲ್ಲಿ ಈಗಲೂ ಎಲ್ಲಾ ಕಷ್ಟ ಕೋಟಲೆಗಳ ಮಧ್ಯೆದಲ್ಲೂ ನಾವು ವಿಶ್ರಾಂತಿ ಪಡೆಯಬೇಕೆಂದು ಬಯಸುತ್ತಾನೆ.

ನಮ್ಮ ಆರೋಗ್ಯಕ್ಕಾಗಿ ಮಾಡಿದ ಪ್ರಾರ್ಥನೆಗೆ ಉತ್ತರ ಸಿಕ್ಕದಿದ್ದರೂ ನಾವು ವಿಶ್ರಾಂತಿ ಮತ್ತು ಸಮಾಧಾನವನ್ನು ಕಂಡುಕೊಳ್ಳುವುದು ಹೇಗೆ?

**ಮಂಗಳವಾರ** **ಆಗಸ್ಟ್ 17**

## ವಿಶ್ವ ಆರೋಗ್ಯ ಸಂಸ್ಥೆ ದತ್ತಾಂಶ

ವಿಶ್ವ ಆರೋಗ್ಯದ ಸಂಸ್ಥೆಯ ಒಂದು ದತ್ತಾಂಶದ ಪ್ರಕಾರ ಪ್ರಪಂಚದಾದ್ಯಂತವಿರುವ ಸರ್ವೇಸಾಮಾನ್ಯನಾದ ಸುಮಾರು ಮುನ್ನೂರು ದಶಲಕ್ಷ (30 ಕೋಟಿ) ಜನರಿಗೆ ಪ್ರತೀ ವರ್ಷವೂ ಬರುತ್ತಿದ್ದು, ಗ್ರಹಿಸಬಹುದಾದ ರೋಗಲಕ್ಷಣಗಳಿಲ್ಲದ ಖಾಯಿಲೆ ಅದುವೇ 'ಖಿನ್ನತೆ'. ಮಾನಸಿಕವಾಗಿ ಒತ್ತಡದಿಂದ ಬಳಲುವ ಖಾಯಿಲೆ. ಪ್ರಪಂಚದಾದ್ಯಂತ ವಿಕಲತೆ ಉಂಟಾಗುವಂತೆ ಮಾಡಲು ಪ್ರಮುಖ ಕಾರಣವಾಗಿದೆ. ಜಾಗತಿಕವಾಗಿ ರೋಗದ ಬಾಧೆಗೆ ಹೆಚ್ಚಿನ ಕೊಡುಗೆ ನೀಡಿದ ಖಾಯಿಲೆ. ದುರ್ಯೋಗವೇನೆಂದರೆ ಕ್ರೈಸ್ತತ್ವದಲ್ಲಿ ಖಿನ್ನತೆಯ ಬಗ್ಗೆ ಏನೂ ಹೇಳಲ್ಪಡುವುದಿಲ್ಲ. ಯಾಕೆಂದರೆ ಇದನ್ನು ಅಪನಂಬಿಕೆಯ ಕುರುಹುವಿನಂತೆ (ಚಿಹ್ನೆಯಂತೆ) ಪರಿಗಣಿಸಲಾಗುತ್ತದೆ. ಮತ್ತೆ ಕ್ರೈಸ್ತರಾದ ನಾವೆಲ್ಲರೂ ಯಾವಾಗಲೂ ಆನಂದ ತುಂಬಿದವರಾಗಿ ಸಂತೋಷದಿಂದ ಜೀವಿಸುವುದು ಬೇಡವೇ? ಆದುದರಿಂದ ಖಿನ್ನತೆಯು ನಮ್ಮ ಮತ್ತು ದೇವರ ನಡುವೆ ಇರುವ ಸಂಬಂಧಕ್ಕೆ ಒಂದು ತಪ್ಪಾದ ಚಿಹ್ನೆಯಲ್ಲವೇ?

ಬಹುತೇಕ ಜನರಿಗೆ ಇದು ಸತ್ಯವಲ್ಲವೆಂದು ತಿಳಿದಿದೆ. ಕ್ರೈಸ್ತರೂ ಅದರಲ್ಲೂ ನಂಬಿಗಸ್ತರೂ ಕೆಲವು ಸಲ ಖಿನ್ನತೆಯಿಂದ ಬಳಲುತ್ತಾರೆ, ವಿಶೇಷವಾಗಿ ಆಘಾತಕರ ಘಟನೆಗಳು ನಡೆದ ಮೇಲೆ, ಇದು ಅಪನಂಬಿಕೆಯಲ್ಲ, ದೇವರ ಮೇಲೆ ಭರವಸೆ ಕಳೆದುಕೊಂಡಂತಲ್ಲ. ಇದಲ್ಲದೆ, ನಾವು ಕೀರ್ತನೆಗಳಲ್ಲಿ ನಂಬಿಗಸ್ತ ಜನರು ಕಷ್ಟಸಂಕಟ ಬಾಧೆಗಳಿಂದ ಬಳಲುವುದನ್ನು ನೋಡುತ್ತೇವೆ.

ಕೆಲವು ಸಲ 'ಖಿನ್ನತೆ'ಯು ನಿಧಾನವಾಗಿ ಮೌನವಾಗಿ ನಮ್ಮನ್ನು ಹಿಡಿದುಕೊಳ್ಳುತ್ತದೆ, ನಮಗೆ ಗೊತ್ತಾಗುವುದು ಅದು ನಮ್ಮ ಮೇಲಿನ ಹಿಡಿತವನ್ನು ಬಿಗಿಗೊಳಿಸುವಾಗ ಕೆಲವು ಸಲ ಮಾನಸಿಕವಾಗಿ, ದೈಹಿಕವಾಗಿ ನಿರ್ಬಲರಾಗಿದ್ದಾಗ ಅದು ನಮ್ಮನ್ನು

ಬೇಗನೆ ಹಿಡಿದುಕೊಳ್ಳುತ್ತದೆ. ಉದಾಹರಣೆಗೆ ದೇವರ ನಂಬಿಗಸ್ತ ಪ್ರವಾದಿಯಾದ ಎಲೀಯನು ಕಾರ್ಮೆಲ್ ಬೆಟ್ಟದಲ್ಲಿ ನಡೆದ ಘಟನೆಯ ನಂತರ ಆತನು ಸಂಪೂರ್ಣವಾಗಿ ಮಾನಸಿಕವಾಗಿ ಮತ್ತು ದೈಹಿಕವಾಗಿ ನಿರ್ಬಲನಾಗಿದ್ದನು.

1 ಅರಸು 18ನೇ ಅಧ್ಯಾಯದಲ್ಲಿ ಎಲೀಯನು ಪರಲೋಕದಿಂದ ಬೆಂಕಿ ಇಳಿಸಿದ ದೇವರ ಅದ್ಭುತಕಾರ್ಯವನ್ನು ಆಗತಾನೆ ನೋಡಿದ್ದಾನೆ. ಆತನು ಮಾಡಿದ ಪ್ರಾರ್ಥನೆಗೆ ಉತ್ತರವಾಗಿ ಮೂರುವರೆ ವರ್ಷ ಬರಗಾಲದ ಬಳಿಕ ಮಳೆಯಾದುದನ್ನು ಕಂಡಿದ್ದಾನೆ. ಎಲೀಯನು ಈಜಬೆಲಳಿಗೆ ಹೆದರಿಕೊಂಡು ಓಡುವ ಪ್ರಯತ್ನ ಮಾಡುತ್ತಾನೆ ಏಕೆ? 1 ಅರಸು 19:1–5ನ್ನು ಓದಿರಿ.

ಎಲೀಯನಿಗೆ ಆ ದಿನದ ಇಪ್ಪತ್ತು ನಾಲ್ಕು ಗಂಟೆಗಳು ಪ್ರಯಾಸಕರವಾಗಿತ್ತು. ಇದರ ಜೊತೆಗೆ ಪ್ರಾಣಭಯ, ಇದು ಅವನಲ್ಲಿ ಖಿನ್ನತೆ ಹುಟ್ಟುವಂತೆ ಮಾಡಿತು. ಬಾಳನ ಪ್ರವಾದಿಗಳನ್ನು ಕೊಲೆ ಮಾಡಿದಾಗ ಎಲೀಯನು ಅಲ್ಲಿದ್ದನು, ಕೆಲವರನ್ನು ತನ್ನ ಕೈಗಳಿಂದಲೇ ಕೊಂದಿದ್ದನು (1 ಅರಸು 18:40). ಅಂತಹ ಘೋರ ಘಟನೆ ಒಳ್ಳೆಯದಕ್ಕಾಗಿ ನಡೆದರೂ ಅದು ಮನಸ್ಸಿಗೆ ಆಘಾತಕರವಾಗಿ ಒತ್ತಡಕ್ಕೆ ಸುಲಭವಾಗಿ ನಡೆಸುತ್ತದೆ. ಕೇವಲ ವೀಕ್ಷಕರಾಗಿದ್ದರೂ ಇಲ್ಲವೇ ಆ ಘಟನೆಯಲ್ಲಿ ಭಾಗಿಯಾಗಿದ್ದರೂ ಅದರ ಪರಿಣಾಮವು ನಮ್ಮ ಮೇಲಾಗುತ್ತದೆ.

ಹಾಗಾಗಿ ಎಲೀಯನು ಓಡಲು ಆರಂಭಿಸಿದ. ದೂರ ಹೋಗಲು ಪ್ರಯತ್ನಿಸಿದ. ಒಮ್ಮೊಮ್ಮೆ ನಾವು ಫ್ರಿಜ್ ಹತ್ತಿರ ಓಡಿಹೋಗುತ್ತೇವೆ. ಅಲ್ಲಿ ನಮಗೆ ಬೇಕಾದದುದನ್ನು ತಿಂದು ಸಂತೋಷಪಡಲು ಪ್ರಯತ್ನಿಸುತ್ತೇವೆ. ಕೆಲವು ಸಲ ನಮ್ಮ ಭಾವನೆಗಳು ಖಾಲಿಯಾಗುವಂತೆ ಮಲಗಿ ನಿದ್ರಿಸಲು ಪ್ರಯತ್ನಿಸುತ್ತೇವೆ. ಕೆಲವು ಸಲ ಹೊಸ ಸಂಬಂಧಗಳಿಗೆ, ಹೊಸ ಕೆಲಸಗಳಿಗೆ, ಜಾಗಗಳಿಗೆ ಹೇಗೆ ದಾಹ ಪಟ್ಟು ಓಡಿಹೋಗಲು ಬಯಸುತ್ತೇವೆ. ಕೆಲವು ಸಲ ನಮ್ಮ ಕೆಲಸಗಳಲ್ಲಿ ತೊಡಗಿಸಿಕೊಂಡು ಮೈಮರೆಯುತ್ತೇವೆ, ಹೆಚ್ಚು ಹೆಚ್ಚು ನಿಗದಿಪಡಿಸಿಕೊಂಡ ಜವಾಬ್ದಾರಿಗಳು, ಹೀಗೆ ಯಾವುದೋ ಒಂದನ್ನು ಮರೆಸಲು ಹೋಗಿ ನಾವೇ ನಮ್ಮ ಸಂತೋಷ ಮತ್ತು ಮನಶ್ಶಾಂತಿಯನ್ನು ಕಳೆದುಕೊಳ್ಳುತ್ತೇವೆ.

ಕೆಲವು ಜನರು ಒಂದಲ್ಲಾ ಒಂದು ಬಗೆಯ "ಔಷಧಗಳನ್ನು" ತೆಗೆದುಕೊಳ್ಳುತ್ತಾರೆ ನೋವನ್ನು ಮರೆಯಲು ಪ್ರಯತ್ನಿಸುತ್ತಾರೆ. ಕಡೆಯದಾಗಿ ಹೇಳುವುದಾದರೆ ಈ

ಎಲ್ಲಾ ವಿಧಾನಗಳು ನಮ್ಮ ರೋಗಲಕ್ಷಣಗಳನ್ನು ಮರೆಸಬಹುದು. ಆದರೆ ನಮ್ಮ ಮೂಲ ಸಮಸ್ಯೆಯನ್ನು ಬಗೆಹರಿಸಲಾರವು. ಬಹಳ ಸಲ ನಮ್ಮ ಪರಿಸ್ಥಿತಿ ತೀರ ಹದಗೆಡುತ್ತದೆ.

**ಬುಧವಾರ** **ಆಗಸ್ಟ್ 18**

## ಓಡಲಾಗದಷ್ಟು ದಣಿವು

ಎಲೀಯನು ಓಡುತ್ತಾ ಓಡುತ್ತಾ ಬಹಳವಾಗಿ ದಣಿದು ಹೋದದ್ದರಿಂದ ಪ್ರಯಾಣವನ್ನು ನಿಲ್ಲಿಸಿದನು. ಜಾಲಿಮರದ ಕೆಳಗೆ ಕೂತುಕೊಂಡು ಮತ್ತೊಮ್ಮೆ ಪ್ರಾರ್ಥಿಸಿದನು. ಈ ಪ್ರಾರ್ಥನೆಯು ಕಾರ್ಮೆಲ್ ಬೆಟ್ಟದಲ್ಲಿ ಬಾಳ್‌ದೇವತೆಯ ಯಾಜಕರು ಮತ್ತು ಪ್ರವಾದಿಗಳ, ಅರಸನ ಆಹ್ವಾನಿತರು ಮತ್ತು ಸಾಮಾನ್ಯ ಜನರ ಸಮ್ಮುಖದಲ್ಲಿ ಮಾಡಿದ ನಂಬಿಕೆ ಪೂರ್ವಕವಾದ ಹಾಗೂ ದೇವರಿಂದ ಉತ್ತರ ಪಡೆದ ಪ್ರಾರ್ಥನೆಗಿಂತ ಭಿನ್ನವಾದುದಾಗಿತ್ತು (1 ಅರಸು 18:36,37). ಈವಾಗ ಮಾಡಿದ ಪ್ರಾರ್ಥನೆಯು ಬಹಳ ಸರಳವಾದ ಹತಾಶೆಯಿಂದ ಕೂಡಿದ ಚಿಕ್ಕ ಪ್ರಾರ್ಥನೆಯಾಗಿತ್ತು.

1 ಅರಸು 19:4ರಲ್ಲಿ ಎಲೀಯನು ತಾನು ತನ್ನ ಪಿತೃಗಳಿಗಿಂತ ಉತ್ತಮನಲ್ಲವೆಂದು ದೇವರಲ್ಲಿ ಅರಿಕೆ ಮಾಡಿದನು. ಎಲೀಯನು ಹೀಗೆ ಯಾವುದರ ಬಗ್ಗೆ ಹೇಳುತ್ತಿದ್ದಾನೆ?

ಕಡೆಯಲ್ಲಿ ಎಲೀಯನು ಪ್ರಯಾಣವನ್ನು ನಿಲ್ಲಿಸಿಬಿಟ್ಟ. ಒಂದು ಸ್ಥಳದಲ್ಲಿ ಕೂತುಕೊಂಡಾಗ ಅವನಲ್ಲಿ ಪಾಪಪ್ರಜ್ಞೆ ಹುಟ್ಟಿತು. ಅವನು ಕಾರ್ಮೆಲ್ ಬೆಟ್ಟದಲ್ಲಿ ನೆರೆದ ಇಸ್ರಾಯೇಲ್ಯರನ್ನು ಬಿಟ್ಟು ತಪ್ಪಿಸಿಕೊಂಡು ಬಂದದ್ದರಿಂದ ಅವರ ಸುಧಾರಣೆಗೆ ಒದಗಿದ ಅವಕಾಶವನ್ನು ಉಪಯೋಗಿಸಿಕೊಳ್ಳದೆ ಹೋದದ್ದು ಅವನ ಅರಿವಿಗೆ ಬಂತು. ಯಾವ ಜನರಿಗೆ ಇವನ ಅವಶ್ಯಕತೆ ಇತ್ತೋ ಅವರೆಲ್ಲರಿಗೂ ನಿರಾಶೆ ಮಾಡದನೆಂದು ತಿಳಿದುಕೊಂಡನು. ಈ ವಿಷಯದಲ್ಲಿ ಆತನು ಏನೂ ಮಾಡಲಾರದಷ್ಟು ಅಸಹಾಯಕನಾಗಿದ್ದನು. ಹಾಗಾಗಿ ಎಲೀಯನು ತನ್ನ ಆತ್ಮಾವಲೋಕನ ಮಾಡಿಕೊಂಡು ನೋವು ಅನುಭವಿಸುವ ಸಂದರ್ಭದಲ್ಲಿ ತನ್ನ ಜನರ ಪೂರ್ಣಚರಿತ್ರೆಯನ್ನು ಚೆನ್ನಾಗಿ ತಿಳಿದವನಾಗಿ ತಾನು ವಾಸ್ತವವಾಗಿ ಯಾವ ಪಾತ್ರವಹಿಸಬೇಕಾಗಿತ್ತು ಎಂಬುದನ್ನು ಕಂಡುಕೊಂಡನು.

ನಾವು ನಿಜವಾಗಿಯೂ ಹೇಗೆ ನಡೆದುಕೊಳ್ಳಬೇಕಾಗಿತ್ತು ಎಂಬುದು ಗೊತ್ತಾದಾಗ ನಮಗೆ ನೋವಾಗಬಹುದು ಅಲ್ಲವೆ?

ದೇವರು ಯೇಸುಕ್ರಿಸ್ತನನ್ನು ನೋಡಿದಂತೆ ಪಾಪಿಗಳಾದ ನಮ್ಮನ್ನು ಸಹಾ ನೋಡುವವನಾಗಿದ್ದಾನೆ ಎಂಬ ವಾಗ್ದಾನವು ನಮಗೆ ಕ್ರಿಸ್ತನಲ್ಲಿ ಕೊಡಲ್ಪಟ್ಟಿರುವುದರಿಂದ ನಾವು ಆತನಿಗೆ ಕೃತಜ್ಞರಾಗಬೇಕಲ್ಲವೇ? (ಫಿಲಿಪ್ಪಿ 3:9ನ್ನು ನೋಡಿರಿ).

ಖಿನ್ನತೆಯು ನಮ್ಮನ್ನು ನಾವೇ ದ್ವೇಷಿಸುವ ಕತ್ತಲ ಸುಳಿಗೆ ಎಳೆಯುವ ದಾರಿಯನ್ನು ಹೊಂದಿದೆ. ಅನೇಕ ಸಲ ಅದರಿಂದ ಹೊರಬರಲು ಮರಣವೊಂದೇ ಮಾರ್ಗ ಎಂಬುದಾಗಿ ಆಲೋಚಿಸತೊಡಗತ್ತೇವೆ. ಎಲೀಯನ ಪರಿಸ್ಥಿತಿಯು ಇಂಥದ್ದೇ ಆಗಿತ್ತು. ನಡೆದ ಘಟನೆಗಳು ಸಹಿಸಿಕೊಳ್ಳಲಾರದಷ್ಟು ಅತಿಯಾಗಿದ್ದವು. ಹಾಗಾಗಿ ಎಲೀಯನು ಕರ್ತನೇ ನನಗೆ ಸಾಕಾಯ್ತು! ನನ್ನ ಪ್ರಾಣವನ್ನು ತೆಗೆದುಬಿಡು ನಾನು ನನ್ನ ಪಿತೃಗಳಿಗಿಂತ ಉತ್ತಮನಲ್ಲ ಎಂದು ದೇವರಿಗೆ ಪ್ರಾರ್ಥಿಸಿದನು (1 ಅರಸು 19:4).

ಶುಭವರ್ತಮಾನವೇನೆಂದರೆ ನಮ್ಮನ್ನು ಗುಣಪಡಿಸುವ ಮಹಾವೈದ್ಯನಾದ ದೇವರು ಎಲೀಯನನ್ನು ಖಂಡಿಸಲಿಲ್ಲ. ಯಾಕೆಂದರೆ ನಾವು ಖಿನ್ನತೆಗೆ ಒಳಗಾದಾಗ ನಾವು ಯಾವುದನ್ನು ಹಗೆ ಮಾಡುತ್ತೇವೆ ಎಂಬುದು ದೇವರಿಗೆ ನಮಗಿಂತಲೂ ಚೆನ್ನಾಗಿ ಗೊತ್ತಾಗಿರುತ್ತದೆ.

"ನಮ್ಮ ರಕ್ಷಕನಾದ ಯೇಸುಕ್ರಿಸ್ತನು ನಮ್ಮ ಮೇಲೆ ಕನಿಕರಪಟ್ಟು ಪ್ರೀತಿಯಿಂದ ತನ್ನ ಮುಖವನ್ನು ನಮ್ಮ ಕಡೆಗೆ ಭಾಗಿಸುವ ಸಂದರ್ಭವನ್ನು ನಾವು ಕಣ್ಣಾರೆ ಕಂಡದ್ದಕ್ಕೆ ಪುರಾವೆಗಳಿಲ್ಲದಿರಬಹುದು, ಆದರೆ ಇದು ಖಂಡಿತವಾಗಿಯೂ ನಿಜವಾಗಿರುತ್ತದೆ. ಆತನ ಕರಗಳ ಸ್ಪರ್ಶ ನಮ್ಮ ಜ್ಞಾನೇಂದ್ರಿಯಗಳಿಗೆ ಗೊತ್ತಾಗ–ದಿರಬಹುದು, ಆದರೆ ಆತನ ಪ್ರೀತಿಯುಳ್ಳ ಸೌಮ್ಯವಾದ ಅನುಕಂಪದ ಕರಗಳು ನಮ್ಮ ಮೇಲೆ ಚಾಚಿಕೊಂಡಿರುತ್ತವೆ"– ಶ್ರೀಮತಿ ಎಲೆನ್ ಜಿ ವೈಟಮ್ಮನವರ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದಲ್ಲಿ 97ನೇ ಪುಟ.

ನಮಗೆ ಈ ಪ್ರಯಾಣವು ಆಯಾಸವಾದುದ್ದೆಂದು ದೇವರಿಗೆ ಗೊತ್ತಿರುತ್ತದೆ. ಆದರೆ ನಾವು ಓಡುವುದನ್ನು ನಿಲ್ಲಿಸುವವರೆಗೆ ಆತನು ಕಾಯಬೇಕಾಗುತ್ತದೆ. ನಾವು

ನಿಂತ ಮೇಲೆ ಆತನು ಮಧ್ಯೆ ಪ್ರವೇಶ ಮಾಡುತ್ತಾನೆ. ಕೆಲವು ಸಲ ನೀರಿನಲ್ಲಿ ಮುಳುಗುತ್ತಿರುವವರು ಗಲಿಬಿಲಿಗೊಂಡು ತಮ್ಮನ್ನು ರಕ್ಷಿಸಬಂದವರನ್ನೇ ತಳ್ಳಿ ಬಿಡುತ್ತಾರೆ. ಆವಾಗ ಅವರು ಪ್ರಜ್ಞೆ ಕಳೆದುಕೊಳ್ಳುವವರೆಗೂ ಕಾಯಬೇಕಾಗುತ್ತದೆ, ನಂತರ ಅವರನ್ನು ಪ್ರಾಣಾಪಾಯದಿಂದ ಪಾರುಮಾಡಲು ರಕ್ಷಣೆ ಮಾಡುವವರಿಗೆ ಸಾಧ್ಯವಾಗುತ್ತದೆ.

ಕೀರ್ತನೆ 34:18, ಮತ್ತಾಯ 5:1–3, ಕೀರ್ತನೆ 73:26, ಯೆಶಾಯ 53:4–6 ಈ ವಚನಗಳಿಂದ ನಾವು ಯಾವ ನಿರೀಕ್ಷೆ ಮತ್ತು ಆದರಣೆಯನ್ನು ಹೊಂದಿಕೊಳ್ಳಬಹುದಾಗಿದೆ?

**ಗುರುವಾರ** **ಆಗಸ್ಟ್ 19**

## ವಿಶ್ರಾಂತಿ ಮತ್ತು ಅದಕ್ಕಿಂತಲೂ ಹೆಚ್ಚಿನದು

ಎಲೀಯನು ಈಜಬೆಲಳಿಂದ ತಪ್ಪಿಸಿಕೊಳ್ಳಲು ಓಡುತ್ತಿದ್ದು, ಬಹಳ ಆಯಾಸಗೊಂಡನೆಂದು ದೇವರಿಗೆ ಗೊತ್ತಿತ್ತು. ಆತನು ದೈಹಿಕವಾಗಿ ಬಳಲಿ ಹೋಗಿರುವುದರ ಜೊತೆಗೆ ಭಾವನಾತ್ಮಕವಾಗಿಯೂ ಬಳಲಿದ್ದಾನೆ. ಬಹುಭಾರವಾದ ಪಾಪಪ್ರಜ್ಞೆಯನ್ನು ಹೊತ್ತುಕೊಂಡಿದ್ದಾನೆ. ಮುಂದೆ ಹೇಗೆ ಯೇಸುಕ್ರಿಸ್ತನು ಪಾರ್ಶ್ವವಾಯು ರೋಗಿಗೆ ಯೇಸುಕ್ರಿಸ್ತನು ಮಾಡಲಿದ್ದನೋ ಹಾಗೆಯೇ ಇಂದು ದೇವರು ಅವನ ಪಾಪವನ್ನು ಅಳಿಸಿ ಹಾಕಿ ಎಲೀಯನಿಗೆ 'ವಿಶ್ರಾಂತಿ' ನೀಡಿದನು. ಅಂತಿಮವಾಗಿ ಎಲೀಯನು ಮಲಗಿನಿದ್ರಿಸಿದ ಮೇಲೆ ನಿರಾಳಗೊಂಡನು.

ನಾವು ಇದನ್ನು ಕಥೆಯ ಮುಕ್ತಾಯ ಎಂದುಕೊಳ್ಳುತ್ತೇವೆ, ಆದರೆ ಮುಕ್ತಾಯವಲ್ಲ. ದೇವರ ವಿಶ್ರಾಂತಿ ಒಂದು ಸಮಯಕ್ಕೆ ನಡೆಯುವ ಘಟನೆಯಲ್ಲ. ಆತನ ವಿಶ್ರಾಂತಿಗೆ ಪ್ರವೇಶಿಸುವಾಗ ನಮಗೆ ನಮ್ಮ ರೋಗವು ವಾಸಿಯಾಗತೊಡಗುತ್ತದೆ, ಜೊತೆಗೆ ನಿಧಾನವಾಗಿ ನಕರತ್ಮಾಕ ಭಾವನೆಯ ವಿಧಾನಗಳು ಮತ್ತು ನಾಶಕರ ಅಭ್ಯಾಸಗಳು ಸಹಾ ಹೋಗಿಬಿಡುತ್ತವೆ. ದೇವರು ಅವಸರದ ಸೌಖ್ಯವನ್ನು ನೀಡುವುದಿಲ್ಲ.

1 ಅರಸು 19:5–8ನ್ನು ಓದಿರಿ. ಎಲೀಯನು ಈವಾಗ ಎಲ್ಲಿಗೆ ಹೋಗುತ್ತಿದ್ದಾನೆ ಮತ್ತು ಯಾಕೆ?

ವಿಶ್ರಾಂತಿ ಪಡೆದುಕೊಂಡ ಮೇಲೆ ಎಲೀಯನು ಮತ್ತೆ ತಪ್ಪಿಸಿಕೊಂಡು ಓಡತೊಡಗುತ್ತಾನೆ. ಆದರೆ ಈ ಸಲ ದೇವರು ಅವನ ಓಟವನ್ನು ಮತ್ತೊಂದು ದಿಕ್ಕಿಗೆ ತಿರುಗಿಸುತ್ತಾನೆ. ಈ ಪಾಪತುಂಬಿದ ಲೋಕವು ಮನುಷ್ಯನಿಗೆ ಮನೋಕ್ಲೇಶಗಳನ್ನು ಕೊಟ್ಟು 'ಮಾನಸಿಕ ಖಿನ್ನತೆ'ಯನ್ನುಂಟು ಮಾಡುತ್ತದೆಯೆಂದು ದೇವರಿಗೆ ತಿಳಿದಿದೆ. ನಮ್ಮ ಓಟದ ತುಡಿತವನ್ನು ಆತನು ಬಲ್ಲನು. ನಾವು ನಮ್ಮ ವಿನಾಶವನ್ನು ನಿಭಾಯಿಸುವ ತಂತ್ರಗಳನ್ನು ಪ್ರಯತ್ನಿಸಿದರೂ ನಮ್ಮ ಓಟವು ತನ್ನ ಕಡೆಗಿರಬೇಕೆಂದು ದೇವರು ಬಯಸುತ್ತಾನೆ. ಒಮ್ಮೆ ನಾವು ಆತನೆಡೆಗೆ ಓಡಿದರೆ ಆತನು ನಮಗೆ ಮಂದ ಮಾರುತದ ಹಾಗೆ 'ಸಣ್ಣಸ್ವರದಲ್ಲಿ' ಬೋಧಿಸುತ್ತಾನೆ (1 ಅರಸು 19:12). ಅದು ನಮಗೆ ವಿಶ್ರಾಂತಿಯನ್ನು ನೀಡುತ್ತದೆ.

ಎಲೀಯನಿಗೆ ಸ್ವತಃ ತಾನೆದ್ದು ದೇವರನ್ನು ಭೇಟಿಯಾಗಲು ಶಕ್ತಿ ಸಾಲಲಿಲ್ಲ. ದೇವರು ಆತನಿಗೆ ಶಕ್ತಿ ನೀಡಿದನು, ದೇವರು ಒಳ್ಳೆಯ ನಾಳೆಯನ್ನು ನಮಗೆ ವಾಗ್ದಾನ ಮಾಡಿದ್ದಾನೆ.

ಎಲೀಯನು ಜಾಲೀಮರದ ಕೆಳಗೆ ಮಲಗಿ ಮರಣವನ್ನು ತನಗೆ ಒಳ್ಳೆಯ ದಿನಗಳು ಮುಗಿದುಹೋದವು ಎಂದುಕೊಂಡಿದ್ದನು.

1 ಅರಸು 19:15,16 ಮತ್ತು 2 ಅರಸು 2:11 ಎಲೀಯನಿಗೆ ಇನ್ನೂ ಏನು ಇಡಲ್ಪಟ್ಟಿದೆ?

ಎಲೀಯನಿಗೆ ಮುಂದೆ ಒಳ್ಳೆಯ ದಿನಗಳು ಇಡಲ್ಪಟ್ಟಿವೆಯೆಂಬುದು ದೇವರಿಗೆ ಗೊತ್ತಿತ್ತು. ದೇವರ ಚಿತ್ತಾನುಸಾರ ನಡೆದು ಆತನ ವಿಶ್ರಾಂತಿಯನ್ನು ಒಪ್ಪಿಕೊಂಡರೆ ಪ್ರವಾದಿಗೆ ಸ್ವಸ್ಥತೆಯು ಬರುವುದಾಗಿತ್ತು. ಆವಾಗ ಇನ್ನೂ ಆತನು ರಾಜರುಗಳನ್ನು ಅಭಿಷೇಕಿಸಬೇಕಾಗಿತ್ತು. ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕಾಗಿತ್ತು. ದೇವರಿಗೆ ಈಗಾಗಲೇ ಎಲೀಷನ ಬಗ್ಗೆ ಗೊತ್ತಿತ್ತು, ಆತನು ಎಲೀಯನಿಗೆ ಮಗನಂತೆಯೇ ಇದ್ದನು. ಎಲೀಯನಲ್ಲಿ ಮತ್ತೆ ಪರಲೋಕದಿಂದ ಬೆಂಕಿ ತರುವ ನಂಬಿಕೆಯಿದೆ ಎಂಬುದು ದೇವರಿಗೆ ಗೊತ್ತಿತ್ತು. ಜಾಲಿಮರದ ಅಡಿಯಲ್ಲಿ ಹತಾಶೆಯಿಂದ ಅಪೇಕ್ಷಿಸಿದ ಸಾವು ಆತನಿಗೆ ಆಗಲಿಲ್ಲ. ಆದರೆ ಅಗ್ನಿಮಯವಾದ ರಥಾರಥಾಶ್ವಗಳ ನಡುವೆ ಪರಲೋಕದ ವಿಶ್ರಾಂತಿಗೆ ಒಯ್ಯಲ್ಪಟ್ಟನು.

ಎಲೀಯನ ಕಥೆಯಿಂದ ನಾವು ಏನು ಕಲಿಯಬಲ್ಲೆವು, ನಾವು ಎಷ್ಟೇ ಕೆಟ್ಟದಾಗಿ ಅಂದುಕೊಂಡಿದ್ದರೂ ಸರಿ, ಆದರೆ ದೇವರ ಶಕ್ತಿಯಲ್ಲಿ ಇನ್ನೂ ಭರವಸೆಯಿಂದ ಸಾಗುವವರಾಗಿರಬೇಕು, ಬಿಟ್ಟು ಬಿಡಬಾರದು ಏಕೆ?

**ಶುಕ್ರವಾರ** **ಆಗಸ್ಟ್ 20**

**ಹೆಚ್ಚಿನ ಚಿಂತನೆ :** ಆಗಾಗ್ಗೆ ನಮ್ಮ ಸನ್ನಿವೇಶಗಳು ಬದಲಾವಣೆಯಾಗುವಾಗ ಬದಲಾವಣೆಗಳ ಅನುಭವವು ನಮಗೆ ಆಗುತ್ತದೆ; ಈ ಬದಲಾವಣೆಗಳಿಂದ ನಾವು ಹಿಗ್ಗುತ್ತೇವೆ ಅಥವಾ ಕುಗ್ಗುತ್ತೇವೆ. ಆದರೆ ಬದಲಾದ ಸನ್ನಿವೇಶಗಳಿಗೆ ನಮಗೂ ದೇವರಿಗೂ ಇರುವ ಸಂಬಂಧವನ್ನು ಬದಲಾಯಿಸುವ ಶಕ್ತಿಯಿರುವುದಿಲ್ಲ. ಆತನು ನಿನ್ನೆ ಇದ್ದ ಹಾಗೆಯೇ ಇಂದೂ ಇರುವನು ಮತ್ತು ಎಂದೆಂದಿಗೂ ಹಾಗೆಯೇ ಇರುತ್ತಾನೆ; ಮತ್ತು ನಾವು ಆತನ ಪ್ರೀತಿಯ ಮೇಲೆ ನಿಸ್ಸಂದೇಹವಾದ ವಿಶ್ವಾಸವನ್ನಿಡಬೇಕೆಂದು ನಮ್ಮನ್ನು ಕೇಳುತ್ತಾನೆ"– ಎಲೆನ್ ಜಿ ವೈಟಮ್ಮನವರ In Heavenly places 120ನೇ ಪುಟ.

"ಯೇಸುಕ್ರಿಸ್ತನ ಮೇಲೆ ದೃಷ್ಟಿಯಿಟ್ಟು ನಂಬಿಕೆಯಿಂದ ಮೌನವಾಗಿ ಆತನ ಬಲವನ್ನು ಹಿಡಿದುಕೊಂಡು, ಭಾವನೆಗಳಿರಲಿ ಇಲ್ಲದಿರಲಿ ಮೌನವಾಗಿ ಪ್ರಾರ್ಥಿಸಬೇಕು. ಹೋಗು, ಈಗಲೇ ಮುಂದೆ ಸಾಗು, ದೇವರ ಸಿಂಹಾಸನಕ್ಕೆ ದಾಖಲಿಸುವಂತೆ ಮತ್ತು ದೇವರ ವಾಗ್ದಾನವು ಎಂದೂ ವಿಫಲವಾಗದೆಂದು ತಿಳಿದವನಂತೆ ನಿನ್ನ ಪ್ರಾರ್ಥನೆಯನ್ನು ಸಲ್ಲಿಸು. ಈಗಲೇ ಹೋಗು, ನೀನು ದುಃಖದ ಭಾರದಿಂದ ಕುಂದಿಹೋಗಿದ್ದರೂ ಹಾಡುತ್ತಾ ದೇವರಿಗೆ ಹೃದಯದಲ್ಲಿ ಗಾನಮಾಡುತ್ತಾ ಸಾಗು ನಾನು ನಿನಗೆ ಹೇಳುವುದೇನೆಂದರೆ, ಬೆಳಕು ಪ್ರಕಾಶಿಸುತ್ತದೆ, ಸಂತೋಷ ನಮ್ಮದಾಗುತ್ತದೆ. ಎಲ್ಲಾ ಮಂಜು, ಕತ್ತಲು ಹಿಂದೆ ಸರಿಯುತ್ತದೆ. ಆಗ ನಾವು ಕತ್ತಲಿಂದ ಮತ್ತು ಬಲಾತ್ಕಾರ ಶಕ್ತಿಯ ನೆರಳಿನಿಂದ ಸಾಗಿ ಆತನ ಸಮ್ಮುಖದ ನಿಚ್ಚಳವಾದ ಸೂರ್ಯಪ್ರಕಾಶಕ್ಕೆ ಬರುತ್ತೇವೆ"– ಎಲೆನ್ ಜಿ ವೈಟಮ್ಮನವರ, ಸೆಲೆಕ್ಟಡ್ ಮೆಸೇಜಸ್, 2ನೇ ಪುಸ್ತಕ, ಪುಟ 242 ಮತ್ತು 243.

## ಚರ್ಚಿಸಬೇಕಾದ ಪ್ರಶ್ನೆಗಳು

1. ಬಹಳ ಸಲ ಮಾನಸಿಕ ಖಾಯಿಲೆ ಅಥವಾ ಖಿನ್ನತೆಯಿಂದ ಬಳಲುತ್ತಿರುವವರಿಗೆ ಸಹಾಯ ಮಾಡುವುದು ಬಹಳ ಕಷ್ಟಕರವಾಗಿರುತ್ತದೆ. ಅಂತಹ ಖಿನ್ನತೆ

ಉಳ್ಳವರನ್ನು ಪರಿಣಾಮಕಾರಿಯಾಗಿ ಸೇವೆ ಮಾಡಲು ಕಲಿಯುವುದಕ್ಕೆ ಉತ್ತಮವಾದ ವಿಧಾನ ಯಾವುದು?

2. ನಾವು ಯಾವಾಗಲೂ ದೇವರ ಮುಂದೆ ಮುಕ್ತವಾಗಿ ಮತ್ತು ಪ್ರಾಮಾಣಿಕವಾಗಿರಲು ಹೋರಾಡುತ್ತೇವೆ. ಕೆಲವು ಕೀರ್ತನೆಗಳನ್ನು ಗಮನಿಸಿರಿ, ಸತ್ಯವೇದದ ಲೇಖಕರು ದೇವರ ಮುಂದೆ ಎಷ್ಟು ಮುಕ್ತರಾಗಿ, ಪ್ರಾಮಾಣಿಕವಾಗಿ ದೇವರ ಮುಂದೆ ತೋರಿಸಿಕೊಂಡರು.

3. ನಮ್ಮ ಸ್ಥಳೀಕ ಸಭೆಯಲ್ಲಿ ಮುಕ್ತತೆ ಮತ್ತು ಪ್ರಾಮಾಣಿಕತೆಯ ಪರಿಸರವನ್ನು ಹೇಗೆ ಪ್ರೋತ್ಸಾಹಿಸಬಹುದು? ನಾವು ಖಿನ್ನತೆಯಿಂದ ಬಳಲುತ್ತಿರುವಾಗ ಪ್ರಾರ್ಥಿಸುವುದು ಬಹಳ ಕಷ್ಟದ ಕೆಲಸ. ತಮಗಾಗಿ ಪ್ರಾರ್ಥಿಸಿಕೊಳ್ಳಲಾರದವರಿಗೆ ಮಧ್ಯಸ್ಥಿಕೆ ಪ್ರಾರ್ಥನೆಯ ಬಗ್ಗೆ ಚರ್ಚಿಸಿರಿ.

4. ನಂಬಿಕೆಯನ್ನು ಭಾವನೆ ಅಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ ಏಕೆ? ನಾವು ಕೇವಲ ಕುಂದಿಹೋಗುವರಿಂದ, ಧೈರ್ಯಗೆಡುವುದರಿಂದ, ಭಯಪಡುವುದರಿಂದ, ಚಿಂತೆ ಮಾಡುವುದರಿಂದ ದೇವರಲ್ಲಿ ನಂಬಿಕೆ ಇಲ್ಲ ಅಥವಾ ಭರವಸೆ ಇಲ್ಲವೆಂದು ಅರ್ಥವಲ್ಲ. ಇದರ ಅರ್ಥವೇನೆಂದು ನಾವು ಕ್ಷಣಿಕವಾಗಿ ಧೈರ್ಯಗೆಡುತ್ತೇವೆ, ಭಯಪಡುತ್ತೇವೆ, ಚಿಂತಿಸುತ್ತೇವೆ. ನಾವೆಲ್ಲರೂ ಒಂದಲ್ಲಾ ಒಂದು ಸಮಯ ಹೀಗೆ ಆಗಿಬಿಡುತ್ತೇವೆ. ಇಂತಹ ಸಂದರ್ಭಗಳಲ್ಲಿ ಎಷ್ಟೇ ಕಷ್ಟವಿದ್ದರೂ ನಂಬಿಕೆಯಿಂದ ಗುರಿಮುಟ್ಟುವುದು ಬಹಳ ಮುಖ್ಯವೆಂಬುದನ್ನು ಹೇಗೆ ಕಲಿಯುತ್ತೇವೆ.

5. ಪಾರ್ಶ್ವವಾಯು ರೋಗಿಯ ಕಥೆಯಿಂದ ವಿಶೇಷವಾಗಿ ಪಾಪಯುತ ಜೀವನ ಶೈಲಿಯಿಂದ ರೋಗ ಕಾಯಿಲೆ ಬರಿಸಿಕೊಂಡವರಿಗೆ ಈ ಕಥೆಯಿಂದ ಯಾವ ದೊಡ್ಡ ನಿರೀಕ್ಷೆಯನ್ನು ಪಡೆದುಕೊಳ್ಳಬಹುದು?